ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.2376/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಇಬ್ರಾಹಿಂ ಪಟೇಲ್** | | |
| **ತಂದೆ:ಹೆಸರು** | **ವಾಸಿಂ ಪಟೇಲ್** | **ಪಿಡಬ್ಲೂ:** | **7** |
| **ವಯಸ್ಸು** | **48 ವರ್ಷ** | **ಸಿಡಬ್ಲೂ:** | **6** |
| **ಉದ್ಯೋಗ:** | **ಕೂಲಿ** | | |
| **ವಾಸ ಸ್ಥಳ:** | **ಸಿಂಧನೂರು.** | | |

**ದಿನಾಂಕ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ಮಗ. ಚಾಸಾ-4 ನನ್ನ ಅತ್ತಿಗೆ, ಚಾಸಾ-5 ನನ್ನ ಅಣ್ಣನ ಮಗ. ಚಾಸಾ-7 ರವರ ಪರಿಚಯ ಇದೆ. ಆರೋಪಿತರು ನಮ್ಮ ಸಂಬಂಧಿಕರು.

ದಿ.17-05-2023 ರಂದು ಬೆ. 9 ರಿಂದ 9-30 ರ ಸುಮಾರಿಗೆ ಚಾಸಾ-1 ರವರು ಮನೆಯ ಹತ್ತಿರ ರಸ್ತೆಯಲ್ಲಿದ್ದ ನಲ್ಲಿಯಲ್ಲಿ ನೀರು ತುಂಬುತ್ತಿದ್ದಾಗ, 1ನೇ ಆರೋಪಿ ಚಾಸಾ-1 ರವರಿಗೆ ಚಾಕುವಿನಿಂದ ತೊಡೆಯ ಭಾಗಕ್ಕೆ ಹೊಡೆದಿರುತ್ತಾನೆ, ಚಾಸಾ-4 ರವರು ಬಿಡಿಸಲು ಬಂದಾಗ 2ನೇ ಆರೋಪಿ ಚಾಸಾ-4 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ಸದರಿ ಘಟನೆಯನ್ನು ನೋಡಿ ನಾನು, ಚಾಸಾ-1 ರವರ ಅಪ್ಪಅಮ್ಮ ರವರು ಚಾಸಾ-1 ರವರನ್ನು ಆಸ್ಪತ್ರೆಗೆ ದಾಖಲೆ ಮಾಡಿದ್ದೆವು.

ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ಹೇಳಿರುವುದನ್ನೇ ನಾನು ಪೋಲೀಸರಿಗೆ ಹೇಳಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ಆರೋಪಿತರು & ಚಾಸಾ-1 ರವರು & ಅವರ ಕುಟುಂಬದವರು ಒಬ್ಬರಿಗೊಬ್ಬರ ನಡುವೆ ಆಸ್ತಿಯ ಸಲುವಾಗಿ ದೂರು ಪ್ರತಿದೂರು ಮಾಡಿಕೊಂಡಿರುತ್ತಾರೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಆರೋಪಿತರು ಬಂದು ಲೇ ಸೂಳೆ ಮಕ್ಕಳೆ ನೀವು ಕೊಟ್ಟ ಕೇಸನ್ನು ವಾಪಾಸು ತೆಗೆದುಕೊಳ್ಳಿ ಎಂದು ಹೊಡೆ ಬಡೆ ಮಾಡಿದ್ದರು ಎಂದರೆ ಸರಿ.

ದಿ. 17-5-2023 ರಂದು ಬೆ. 9-30 ಕ್ಕೆ ನಾನು & ಚಾಸಾ-5 ರವರು ಅವರ ಮನೆಯ ಕಡೆಗೆ ಹೋಗುತ್ತಿದ್ದಾಗ, ಇಂದ್ರಾನಗರದಲ್ಲಿರುವ ನಮ್ಮ ಮನೆಯ ಹತ್ತಿರ ಹೋಗುತ್ತಿದ್ದಾಗ, ಆರೋಪಿತರು ಅಲ್ಲಿಗೆ ಬಂದು, ಚಾಸಾ-1 ರವರಿಗೆ ಹೊಡೆಬಡೆ ಮಾಡುವುದನ್ನು ನೋಡಿ ನೀವು ಬಿಡಿಸಿಕೊಳ್ಳಲು ಸ್ಥಳಕ್ಕೆ ಹೋದಿರಿ ಎಂದರೆ ಸರಿ. ನಂತರ ಆರೋಪಿತರು ಹೋಗುವಾಗ ಇವತ್ತು ಉಳಿದುಕೊಂಡಿದ್ದೀರಿ, ಇನ್ನೊಮ್ಮೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದರು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ನಂತರ ಚಾಸಾ-1 ರವರನ್ನು ನಾನು ವಿಚಾರಿಸಿದಾಗ ಅವರು ತಿಳಿಸಿದ್ದೇನೆಂದರೆ ಅದೇ ದಿನ ಬೆ.9-15 ಕ್ಕೆ ಆರೋಪಿತರು ಬಂದು ಆತನಿಗೆ ಲೇ ಸೂಳೆ ಮಗನೆ ನೀನು ಕೊಟ್ಟ ಕೇಸನ್ನು ವಾಪಾಸ್ ತೆಗೆದುಕೋ ಎಂದು ಜಗಳ ತೆಗೆದನು, ಆಗ ಚಾಸಾ-1 ರವರು ಹಿರಿಯರ ಸಮಕ್ಷಮ ಮಾತನಾಡಿ ಎಂದು ಹೇಳಿದಕ್ಕೆ, ಆತನಿಗೆ ಹೊಡೆ ಬಡೆ ಮಾಡಿದ್ದರು, 1 ನೇ ಆರೋಪಿ ಮು. ಮಾ. 1 ರಿಂದ ಚಾಸಾ-1 ತೊಡೆಗೆ ಚುಚ್ಚಿದನು ಎಂದು ತಿಳಿಸಿದ್ದರು ಎಂದರೆ ಸರಿ. ನಂತರ ಜಗಳವನ್ನು ನೀವು & ಚಾಸಾ-5 ರವರು ಬಿಡಿಸಿಕೊಂಡು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದಿರಿ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ಆರೋಪಿತರು ಹೈದ್ರಾಬಾದ್‌ನಲ್ಲಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ತಂದೆ ಇಲ್ಲಿ ಇರುತ್ತಾರೆ ಎನ್ನುತ್ತಾರೆ. ಆರೋಪಿತರಿಗೂ & ದೂರುದಾರರಿಗೂ ನಡುವೆ ಸಿವಿಲ್ ವ್ಯಾಜ್ಯಗಳಿವೆ ಎಂದರೆ ಸರಿ.

2. ಆರೋಪಿತರೇ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಮು. ಮಾ. 1 ರಂತನ ಚಾಕು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ.

3. ಈ ಘಟನೆಯನ್ನು ನೀವು ನೋಡಿಲ್ಲ ಆದ್ದರಿಂದ ಘಟನೆಯ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೂರುದಾರರು ನಿಮ್ಮ ಸಂಬಂಧಿಕರಾದ ಕಾರಣ, ಈ ರೀತಿ ಸಾಕ್ಷಿ ಹೇಳಿದರೆ ಅವರಿಗೆ ಅನಕೂಲ ಆಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನೀವು ಹೇಳಿದಂತೆ ಆರೋಪಿತರು ಚಾಸಾ 1 & 2 ರವರಿಗೆ ಹೊಡೆದಿಲ್ಲ, ಬಡೆದಿಲ್ಲ, ಅವಾಚ್ಯವಾಗಿ ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಚಾಕುವಿನಿಂದ ಚುಚ್ಚಿಲ್ಲ ಎಂದರೆ ಸರಿಯಲ್ಲ. ದೂರುದಾರರು ನಿಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲುಸುಳ್ಳು ಸಾಕ್ಷಿ ಹೇಳುತ್ತದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**